

# ಕಲ್ಲಿನ ಗುಡ್ಡದಲ್ಲಿ ಅರಳಿದ ನಂದನ

**ಹುಬ್ಬಳ್ಳಿಗೆ ಸಮೀಪದ ಮಾವನೂರು ಗ್ರಾಮದ ದ್ಯಾಮನಗೌಡ ತಮ್ಮನಗೌಡ ಪಾಟೀಲರು ಕಲ್ಲುಗುಡ್ಡವನ್ನು ಫಲವತ್ತಾಗಿಸಿದ್ದಾರೆ; ಯಶಸ್ವಿ ಕೃಷಿಕ ಎನ್ನಿಸಿಕೊಂಡಿದ್ದಾರೆ.**

■ ಗೋವರ್ಧನ ಎಸ್.ಎನ್.

ಶಿವರಾಮ ಕಾರಂತರ 'ಬೆಟ್ಟದ ಜೀವ' ಕಾದಂಬರಿಯ ಗೋಪಾಲಯ್ಯ, ತೋಟ ಮಾಡಲಾಗದೆಂದು ಭಾವಿಸಿದ್ದ ಭೂಮಿಯಲ್ಲಿ ಕೃಷಿ ಮಾಡಿ ಯಶಸ್ವಿಯಾಗುತ್ತಾನೆ. ಗೋಪಾಲಯ್ಯನ ಯಶೋಗಾಥೆಯ ಮೂರ್ತರೂಪದಂತೆ ಕಾಣಿಸುತ್ತಿದ್ದಾರೆ, 78ರ ಹರೆಯದ ದ್ಯಾಮನಗೌಡ ತಮ್ಮನಗೌಡ ಪಾಟೀಲ. ಕಲ್ಲುಗಳಿಂದ ಕೂಡಿದ್ದ ಗುಡ್ಡವನ್ನು ಫಲವತ್ತಾಗಿಸಿ, ಹಸುರ ಹೊದಿಕೆ ಹೊದಿಸಿರುವ ಸಾಧನೆ ಈ ಪಾಟೀಲರದು.

ಹುಬ್ಬಳ್ಳಿಯಿಂದ ಸುಮಾರು 8 ಕಿ.ಮೀ. ದೂರದ ಮಾವನೂರು, ಪಾಟೀಲರ ತಪೋಭೂಮಿ. ತರಹೇವಾರಿ ಬೆಳೆಗಳನ್ನು ತನ್ನ ಮಡಿಲಲ್ಲಿ ಇರಿಸಿಕೊಂಡು, ಹಸುರಿನಿಂದ ಕಂಗೊಳಿಸುವ 10 ಎಕರೆ ವಿಸ್ತೀರ್ಣದ ಭೂಮಿ ಈ ಹಿಂದೆ ಕಲ್ಲುಗಳಿಂದ ಕೂಡಿತ್ತು, ನಿರುಪಯುಕ್ತ ಭೂಮಿಯಾಗಿತ್ತು.

ತಂದೆಯಿಂದ ಬಳುವಳಿಯಾಗಿ ಬಂದ ಜಾಗವನ್ನು ಜತನದಿಂದ ಉಳಿಸಿಕೊಂಡು, ಹಸುರ ಉಸಿರು ತುಂಬಲು ಡಿ.ಟಿ. ಪಾಟೀಲರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಅವರೇ ಹೇಳುವಂತೆ, ಲೋಡುಗಟ್ಟಲೆ ಕಲ್ಲುಗಳನ್ನು ಹೆಕ್ಕಿ ಬೇರೆಡೆಗೆ ಸಾಗಿಸಿದರು; ಗುಂಡಿಗಳನ್ನು ತೋಡಿ ಅದರಲ್ಲಿ ಮಳೆ ನೀರು ಇಂಗುವಂತೆ ಮಾಡಿದರು; ಸಮೀಪದಲ್ಲಿದ್ದ ಕೆರೆಯನ್ನು ಗುತ್ತಿಗೆಗೆ ಪಡೆದು ಅದರಲ್ಲಿನ ಫಲವತ್ತಾದ ಮಣ್ಣನ್ನು ಗುಡ್ಡಕ್ಕೆ ಹಾಕಿಸಿ, ಹನಿ ನೀರಾವರಿ ಪದ್ಧತಿಯಲ್ಲಿ ಬೆಳೆ ಬೆಳೆಯಲು ಅತೀವ ಶ್ರಮಪಟ್ಟರು. ಅದರ ಫಲ ಈಗ ಕಣ್ಣೆದುರಿಗಿದೆ.

ಅಣ್ಣಾ ಹಜಾರೆ ಅವರು ರಾಲೇಗಾಂವ್ ಸಿದ್ಧಿಯಲ್ಲಿ ಮಾಡಿದ ಕೃಷಿ ಕಾಯಕದಿಂದ ಸ್ಫೂರ್ತಿಗೊಂಡು ಗುಡ್ಡದಲ್ಲಿ ಬೇಸಾಯದ ಯೋಚನೆ ಮಾಡಿದ ಪಾಟೀಲರಿಗೆ ನೆರವಾದವರು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಬೇಸಾಯಶಾಸ್ತ್ರದ ಪ್ರಾಧ್ಯಾಪಕ ವಿಜಯಕುಮಾರ ಗಿಡ್ನವರ ಹಾಗೂ 18 ವಿದ್ಯಾರ್ಥಿಗಳು. 2004ರಲ್ಲಿ ಕೃಷಿಗಾಗಿ ಸಾಲ ನೀಡಿದ ಯುಟಿಐ ಬ್ಯಾಂಕ್, ಸೂಕ್ತ ಮಾರ್ಗದರ್ಶನ ನೀಡಿದ ಜೈನ್ ಇರಿಗೇಷನ್ ತಾಂತ್ರಿಕ ಅಧಿಕಾರಿ ಬಾಳಾಸಾಹೇಬ ಪಾಟೀಲ ಅವರನ್ನು ಪಾಟೀಲರು ಈಗಲೂ ನೆನೆಯುತ್ತಾರೆ.

ಅವಿರತ ಶ್ರಮದ ಫಲವಾಗಿ ಇಂದು 2200 ಸಾಗುವಾನಿ ಮರಗಳು, 1080 ಮಲೇಷ್ಯಾ ತಳಿಯ ತೆಂಗಿನ ಮರಗಳು, ಐದು ಎಕರೆಯಲ್ಲಿ ವೆಂಗುರ್ಲದ ಮಾವಿನ ಮರಗಳು ಹಾಗೂ ಗೋಡಂಬಿ ಗಿಡಗಳು, ಆಂಧ್ರಪ್ರದೇಶದ ಸೀತಾಫಲ ಗಿಡಗಳು, 4 ಎಕರೆಯಲ್ಲಿ ತೀರ್ಥಹಳ್ಳಿಯ ಅಡಿಕೆ ಮರಗಳು, 150 ಶ್ರೀಗಂಧದ ಗಿಡಗಳು ಸಮೃದ್ಧವಾಗಿ ಬೆಳೆದಿವೆ. ಮನೆಗಾಗಿ ವಿವಿಧ ಹೂಗಳು, ಮಸಾಲ ಪದಾರ್ಥ, ಹಣ್ಣು–ತರಕಾರಿಗಳನ್ನು ಬೆಳೆಯುತ್ತಾರೆ, ನೆಂಟರಿಷ್ಟರಿಗೂ ಹಂಚುತ್ತಾರೆ.

ಒಂದೇ ಬೆಳೆಗೆ ಅಂಟಿಕೊಳ್ಳದ ಪಾಟೀಲರು, ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಂಡುಕೊಂಡು ಕೈತುಂಬ ಆದಾಯ ಗಳಿಸುತ್ತಿದ್ದಾರೆ. ವಿವಿಧ ಸಂದರ್ಭಗಳಲ್ಲಿ ಬೇರೆ ರಾಜ್ಯಗಳಿಗೆ ಪ್ರವಾಸಕ್ಕೆ ತೆರಳಿ, ಕೃಷಿ ಕ್ಷೇತ್ರಗಳ ಅಧ್ಯಯನದಿಂದ ಪಡೆದ ಜ್ಞಾನದ ಮೂಲಕ ಹೊಸ ಪ್ರಯೋಗದಲ್ಲೂ ನಿರತರು. ಸದ್ಯ ಗುಡ್ಡದ ಕೆಳಗಿನ 3 ಎಕರೆ ಜಮೀನಿನಲ್ಲಿ 1500 ಅಡಿಕೆ ಸಸಿ ನೆಡಲಾಗಿದೆ. 1500 ಬಾಳೆ ಸಸಿ ನೆಡುವ ಯೋಜನೆಯೂ ಚಾಲ್ತಿಯಲ್ಲಿದೆ. ಪಾಟೀಲರ ಎಲ್ಲ ಕಾಯಕಕ್ಕೂ ಪತ್ನಿ ಶೋಭಾ, ಮಕ್ಕಳು ಬೆನ್ನೆಲುಬಾಗಿದ್ದಾರೆ.

ಎರೆಮಣ್ಣು, ಗಿಡದ ತಪ್ಪಲು, ಕೋಳಿ–ಕುರಿ–ಸಗಣಿ ಗೊಬ್ಬರ, ಜೈವಿಕ ಕೀಟ ಹಾಗೂ ಶಿಲೀಂಧ್ರನಾಶಕ, ಪಂಚಗವ್ಯ, ಜೀವಾಮೃತ ಹಾಗೂ ಗೋಮೂತ್ರ ಮಾವನೂರು ಗುಡ್ಡವನ್ನು ಫಲವತ್ತಾಗಿಸಿವೆ. ಪಾಟೀಲರ ಕೃಷಿ ಸಾಧನೆಗೆ 'ಶ್ರೇಷ್ಠ ಕೃಷಿಕ ಪ್ರಶಸ್ತಿ', 'ರಾಜ್ಯ ಕೃಷಿ ಪಂಡಿತ ಪ್ರಶಸ್ತಿ', 'ಕನಕ ಪ್ರಶಸ್ತಿ' ಹಾಗೂ 2013ರಲ್ಲಿ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ಸಂದಿವೆ.

ಪ್ರತಿಕ್ರಿಯಿಸಿ: feedback@sudha.co.in

### ಹೈನುಗಾರಿಕೆಯಲ್ಲೂ ಯಶಸ್ಸು

ಎಚ್.ಎಫ್. ಹಸುವಿಗೆ ಗಿರ್ ಹೋರಿ ಸಂಕರಣ ಮಾಡಿಸಿದ್ದರಿಂದ ಜನಿಸಿದ ನಾಲ್ಕು ಗಿರ್ ಹಸುಗಳು ಪಾಟೀಲರ ತೋಟದಲ್ಲಿವೆ. ಹೆಚ್ಚಿನ ಪ್ರಮಾಣದಲ್ಲಿ ಹಾಲು ನೀಡುವ ಗಿರ್, ಕಾಂಕ್ರೆಜ್, ಮಲೆನಾಡ ಗಿಡ್ಡ ಜಾನುವಾರುಗಳೊಂದಿಗೆ ಕುರಿ ಸಾಕಣೆಯನ್ನೂ ಮಾಡುತ್ತಿದ್ದಾರೆ.